ಶ್ರೀ ಕೆ. ಎಚ್. ಪಾಟೀಲ್ :—೬೫ ಸಾವಿರ ಟನ್ ಇದ್ದರೆ ಅದು ರಾಬಿ ಜವಾರ್ ಮಟ್ಟಿಗೆ ಮಾತ್ರ. ಖಾರಿಫ್ ಜವಾರ್ ಮತ್ತು ಹೈಬ್ರಿಡ್ ಜವಾರ್ ಪ್ರಕ್ಯೂರ್ ಮಾಡಲಿಲ್ಲ. ರಾಬಿಜವಾರ್ ಫೆಬ್ರವರಿ-ಮಾರ್ಚಿನಲ್ಲಿ ಚಾಲು ಆಗಿರುವುದರಿಂದ ೬೫ ಸಾವಿರ ಟನ್ ಪೂರ್ತಿಯಾಗಿ ವಸೂಲು ಆಗ ಬಹುದೆಂದು ಭರವಸೆ ಇದೆ.

ಶ್ರೀ ಟಿ. ಎಂ. ಮಂಜುನಾಥ್ :—ಹಿಂದೆ ರಾಗಿ ಲೆವಿ ವಿಚಾರ ಹೇಳಿದಿರಿ. ನಮ್ಮ ತಾಲ್ಲೂಕಿನಲ್ಲಿ ಬೀಜ ಬಿತ್ತಿದ್ದರೇ ವಿನಹ ಬೆಳೆಯಾಗಲಿಲ್ಲ. ಅಂಥ ಕಡೆ ನೋಟೀಸ್ ಕೊಟ್ಟು ರೈತರ ಮೇಲೆ, ತಹಸೀಲ್ದಾರರು, ಸಂಬಂಧಪಟ್ಟವರು, ರೈತರಿಗೆ ಹಿಂಸೆ ಕೊಟ್ಟು ವಸೂಲು ಮಾಡುತ್ತಿದ್ದಾರೆ ಎಂದು ಅಲ್ಲಿಯ ಜನಗಳಿಂದ ದೂರು ಬಂದಿದೆ. ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಟ್ಟು ಸಹಾಯ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್ :—ಈ ವಿಷಯವಾಗಿ ನಾನು ಈಗಾಗಲೇ ಸ್ಟೇಟ್‌ಮೆಂಟನ್ನು ಮಾಡಿದ್ದೇನೆ. ಮಾನ್ಯ ಸದಸ್ಯರು ಒಂದೇ ಉಸಿರಿನಲ್ಲಿ ಏತಕ್ಕೆ ಲೇವಿಯನ್ನು ವಸೂಲಿ ಮಾಡಿದ್ದೀರಿ ಎಂದು ಹೇಳುತ್ತಾರೆ. ಮತ್ತೆ ಕೆಲವು ಸದಸ್ಯರು ವಸೂಲು ಮಾಡಿರುವುದು ಕಡಿಮೆಯಾಗಿದೆಂದು ಹೇಳುತ್ತಾರೆ. ಲೆವಿ ೨೫ ಸಾವಿರ ಟನ್ ಕಡಿಮೆ ಮಾಡಿದರೂ ಸಹ, ಇಲ್ಲಿಯ ತನಕ ಕೊಟ್ಟಿಲ್ಲ. ರಾಗಿ ಬೆಳೆದಂಥ ರೈತರ ಮೇಲೆ ಕಟ್ಟಲೆ ಹಾಕಿದಂಥ ಒಂದು ಉದಾಹರಣೆ ಕೂಡ ಇಲ್ಲ. ಏನೂ ಮಾಡಲಿಲ್ಲ ಏಂದರೆ ೧೦ ಸಾವಿರ ಟನ್ ವಸೂಲು ಆಗುವುದಿಲ್ಲ. ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇವೆ ಮತ್ತೆ ೪ ಆಣೆಗಿಂತ ಕಡಿಮೆ ಬೆಳೆಯತಕ್ಕವರಿಗೆ ಬಿಟ್ಟು ಬಿಡಿ ಎಂದು ಹೇಳಿದ್ದೇನೆ. ೬ ಆಣೆಗಿಂತ ಎಲ್ಲಿ ಕಡಿಮೆಯಾಗಿದೆ ಅಲ್ಲಿ ೭೫ ಪರ್‌ಸೆಂಟ್ ಮಾಫಿ ಮಾಡಿದ್ದೇವೆ ಮತ್ತು ೬ ಆಣೆಗಿಂತ ಜಾಸ್ತಿ ಅಂದರೆ ೮ ಆಣೆ ಆಗಿರುವ ಕಡೆ ೫೦ ಪರ್‌ಸೆಂಟ್ ಮಾಫಿ ಮಾಡಿದ್ದೇವೆಂದು ಹೇಳಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಸೌಲಭ್ಯ ಒದಗಿಸುವುದಕ್ಕೆ ಸಾಧ್ಯವಿಲ್ಲ. ಸಂಗ್ರಹಿಸಿ ಕೊಂಡಿರತಕ್ಕ ರೈತರು ಇದ್ದರೆ ಅವರು ಅರ್ಜಿ ಮಾಡಿ ಮನವಿ ಮಾಡಿಕೊಳ್ಳದಿದ್ದರೆ ಅನಿವಾರ್ಯವಾಗಿ, ಕಾನೂನುಬದ್ಧವಾಗಿ ಇರತಕ್ಕ ಕ್ರಮವನ್ನು ಅನುಸರಿಸಬೇಕಾಗುತ್ತದೆ.

STATEMENT BY THE MINISTER FOR PUBLIC WORKS AND ELECTRICITY

Re : Construction of a building at Jayangar

Sri H. M. CHANNABASAPPA (Minister for Public Works and Electricity) :

Madam Speaker, in pursuance of the statement made by me on the floor of the House yesterday, I beg permission to place a statement of account pertaining to construction of building at Site No. 55/C, VIII Block, Jayanagar, Bangalore, by Nandi Investment and Enterprises, of which I am one of the partners, and in doing so, I would like to say a few words.

The building on site No. 55/C, VIII Block, Jayanagar, Bangalore-10, is being constructed by a partnership Firm, viz., "NANDI INVESTMENTS AND ENTERPRISES", registered on 24th July 1973. Sri H. M. Channabasappa is the Managing Partner of the firm.

The site measures 80′ × 120′. It is proposed to construct four floors including ground floor. The estimated cost for the ground, lst and 2nd floors is Rs. 3,56,220. The cost for the III floor is under estimation.

The ground floor of the building is designed for the Syndicate Bank. The lst, 2nd and 3rd floors are designed for Guest Houses for Industrial Concerns. The Bank has agreed to take up the ground floor for running its Banashankari Branch at a rental value of Re. 0.80 per sq. ft. of carpet area. Two Industrial concerns have agreed to take the other floors under the same terms and conditions entered into by the Bank.

The Syndicate Bank has made an advance of Rs. 3.25 lakhs to the firm on the security of properties of the partners and the building under construction. One of the tenants has made an advance payment of Rs. 15,000 for reservation. The other tenant has also agreed to provide finances, if needed. Thus the firm has Rs. 3.40 lakhs at its disposal for construction of the house. The outlay as on date is Rs. 1,47,699.20.

M/s. Maheshchandra and Associates, Bangalore, are the Engineers and Architects and M/s. Shivalingaiah and Co., Chartered Accountants, Bangalore, are the Auditors, of the firm.

ಶ್ರೀ ಎಂ. ಎಸ್. ಕೃಷ್ಣನ್ :—ಸಭಾಧ್ಯಕ್ಷರೇ, ಅವರು ಮನೆಗೆ ಸಂಬಂಧಪಟ್ಟ ಹಾಗೆ ಲೆಕ್ಕಾಚಾರ ಏನು ಈ ಮನೆಯ ಮುಂದೆ ಇಟ್ಟಿದ್ದಾರೆ ಅದು probably it is in response to what Sri Konandur Lingappa said yesterday. ನಮಗೆ ಗೊತ್ತಾಗಬೇಕಾದ್ದು ಇನ್ನೊಂದು ವಿಷಯ. ಅದು ಏನು ಆಯಿತು. ವಿಜಿಲೆನ್ಸ್ ಕಮೀಷನರ್‌ರವರನ್ನು ೨೪ ಗಂಟೆಯೊಳಗೆ ಕಳುಹಿಸಿಕೊಡುತ್ತೇವೆಂದು ನಿನ್ನೆ ದಿವಸ ಮಾನ್ಯ ಚನ್ನಬಸಪ್ಪನವರು, ಕೃಷ್ಣರವರು ಆಶ್ವಾಸನೆ ಕೊಟ್ಟರು. ಅದರ ಬಗ್ಗೆ ಏನು ಆಗಿದೆ ? ಇನ್‌ವೆಸ್ಟಿಗೇಷನ್ ನಡೆಯಿತೇ ? ವಿಜಿಲೆನ್ಸ್ ಕಮೀಷನರ್‌ರವರು ಹೋಗಿದ್ದರೆ ? ಅವರಿಂದ ರಿಪೋರ್ಟ್ ಬಂತೆ ? ಆ ರಿಪೋರ್ಟನ್ನು ಯಾವಾಗ ಇಡುತ್ತೀರಿ, ಎಂದು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ :—ವಿಜಿಲೆನ್ಸ್ ಕಮೀಷನರ್‌ರವರು ಹೋಗಿದ್ದರು. ಇರತಕ್ಕ ಸ್ಟಾಕ್ ಗಳನ್ನು ತೂಕ ಮಾಡುತ್ತಿದ್ದಾರೆ. ಮತ್ತೆ ಅದು ನೂರಾರು ಟನ್ ಆಗಿರುವುದರಿಂದ ತೂಕ ಮಾಡಿ ಲೆಕ್ಕ ಹಾಕುವುದಕ್ಕೆ ಕಾಲಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ನಿನ್ನೆ ಹೋಗಿ ನೋಡಿಕೊಂಡು ಬಂದವರು ಕಬ್ಬಿಣ ಇಲ್ಲವೆಂದು ಹೇಳಿದ್ದಾರೆ. ಈಗ ಕಬ್ಬಿಣ ಇದೆ ಎಂದು ಹೇಳುತ್ತೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ :—ಅವರು ಹೇಳಿದ್ದನ್ನು ನಾನು ಇಲ್ಲಿ ಹೇಳುವದಿಲ್ಲ. ಅವರಿಗೆ ತಿಳಿದಿದ್ದನ್ನು ಅವರು ಹೇಳಿದರು. ತೂಕ ಆಗುತ್ತಿದೆ. ಸದಸ್ಯರು ಬೇಕಾದರೆ ಹೋಗಿ ನೋಡಿಕೊಂಡು ಬರಬಹುದು. ನನಗೆ ಈ ವರದಿ ಬಂದಿರತಕ್ಕ ಪ್ರಕಾರ ಸಾಯಂಕಾಲದೊಳಗೆ ತೂಕವಾಗಬಹುದು ಎಂದು ಅವರು ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್ :—ನಮಗೆ ಬೇಕಾಗಿರುವುದು ತೂಕವಾಗುತ್ತಿರುವ ಸ್ಟೀಲ್ ಅಲ್ಲ. ಒಂದು ಸಲ ತೂಕವಾಗಿ ಕಾಂಪೌಂಡಿನೊಳಗೆ ಇದ್ದ ಸ್ಟೀಲ್. ಈಗ ರಾತ್ರೋ ರಾತ್ರಿ ತರಿಸಿ ಹಾಕಿ ತೂಕ ಮಾಡುತ್ತಿದ್ದಾರೆ.

Sri H. M. CHANNABASAPPA :—I have no objection if any one of the Hon. member wants to go and see all these things. The only information that I got just now is that it is under weighment.

Sri M. S. KRISHNAN :—The Hon'ble Minister was pleased to say that he will see that the whole thing is seized.

Sri H. M. CHANNABASAPPA :—I have asked the Vigilance Commissioner himself to be on the spot and to do all that is necessary, and accordingly it is being done. Further information would be made available after the report is received.

ಶ್ರೀ ಕೆ. ಎಚ್. ಹನುಮೇಗೌಡ :—ತೂಕವನ್ನು ಎಲ್ಲಿ ಮಾಡುತ್ತಿದ್ದಾರೆ ?

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ಅಧ್ಯಕ್ಷರೇ, ಚನ್ನಬಸಪ್ಪನವರು ಪ್ರಸ್ತಾಪ ಮಾಡುತ್ತಾ ಇರುವಾಗ ಏನು ಹೇಳಿದರು ? ಎಷ್ಟು ಹೊತ್ತು ಆದರೂ ಕೂಡ ಆ ವಿವರವನ್ನು ಮಂಡಿಸುತ್ತೇನೆಂದು ಹೇಳಿದ್ದರು.

ನಾನು ಅದಕ್ಕೋಸ್ಕರವೇ ರಾತ್ರಿ ಸುಮಾರು ಏಳು ಅಥವಾ ಏಳುವರೆ ಗಂಟೆ ಹೊತ್ತಿನಲ್ಲಿ ಅತ್ತ ಕಡೆಗೆ ಒಂದು ಸುತ್ತು ತಿರುಗಾಡಿಕೊಂಡು ಬರಲು ಹೋಗಿದ್ದೆ. ಆ ವೇಳೆಯಲ್ಲಿ ಅಲ್ಲಿ ಒಬ್ಬ ವಾಚಮ್ಯಾನನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ.....

ಶ್ರೀ ಎಚ್. ಎಂ. ಚನ್ನಬಸಪ್ಪ :—ಮತ್ತೆ ರಾತ್ರಿಯಲ್ಲಿ ತಾವು ಹೋಗಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ :—ತಾವು ಹೋಗಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ನಾನು ಹೋಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಸರಿ. ನಾನೂ ಹೋಗಿಲ್ಲ–ತಾವೂ ಹೋಗಿಲ್ಲ. ನಾನು ಮತ್ತೆ ಈ ದಿವಸ ಬೆಳಗ್ಗೆ ಹನ್ನೆರಡೂವರೆ ಗಂಟೆಗೆ ಒಂದಾವರ್ತಿ ಅತ್ತ ಕಡೆಗೆ ಹೋಗಿದ್ದೆ. ಆಲ್ಲಿ ಕಬ್ಬಿಣ ಸಾಗಿಸಿ ತೂಕ ಮಾಡುತ್ತಿದ್ದರು. ಆದರೇ ಈ ದಿವಸವೇ ಈ ಬಗ್ಗೆ ಒಂದು ಸಂಕ್ಷಿಪ್ತ ವರದಿಯನ್ನು ತರಿಸಿ ಮಾನ್ಯ ಅಧ್ಯಕ್ಷರ ಮುಂದೆ ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೆಗೌಡ:—ಮಾನ್ಯ ಚನ್ನಬಸಪ್ಪನವರ ಒಂದು ತೃಪ್ತಿಗಾಗಿ ಆ ಒಂದು ಹೇಳಿಕೆಯನ್ನು ತರಿಸಿ ಅವರು ಇಟ್ಟುಕೊಳ್ಳಬಹುದು. To satisfy himself, he can place the accounts before this House.

ಶ್ರೀ ಬಿ. ಪುಟ್ಟಸ್ವಾಮಯ್ಯ :— ಸನ್ಮಾನ್ಯ ಅಧ್ಯಕ್ಷರೇ ; ಇದರಲ್ಲಿ ಮುಖ್ಯವಾಗಿ ಎರಡು ಅಂಶಗಳು ಶ್ರೀ ಕೊಣಂದೂರು ಲಿಂಗಪ್ಪನವರು ಎತ್ತಿರುವುದು ಏನೆಂದರೆ—ಮೊದಲನೆಯ ಅವರ ಆಕ್ಷೇಪಣೆ : ಅಧಿಕಾರಿಗಳಿಂದ ಸಾಮಾನುಗಳು ಪರಾರಿಯಾಗಿದ್ದರೆ ಅವರನ್ನು ಶಿಕ್ಷೆಗೆ ಒಳಪಡಿಸುವುದು ಒಂದನೇ ವಿಚಾರ.

ಅಧ್ಯಕ್ಷರು :—ಆ ವಿಚಾರಗಳೆಲ್ಲ ನಿನ್ನೆಯ ದಿವಸವೇ ಪೂರ್ಣವಾಗಿ ಚರ್ಚೆಯಾಗಿವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅಧಿಕಾರಿಗಳ ತಪ್ಪನ್ನು ವಿಚಾರಣೆ ಮಾಡುವುದಕ್ಕೆ ವಿಜಿಲೆನ್ಸ್ ಕಮಿಷನರನ್ನು ನೇಮಕ ಮಾಡಿದ್ದಾರೆ. ಆದರೆ ಎರಡನೇ ಆಪಾದನೆ ಮಾನ್ಯ ಮಂತ್ರಿಗಳೇ ಆ ಸಾಮಾನು ಗಳನ್ನು ಉಪಯೋಗ ಮಾಡಿದ್ದಾರೆಂದು ಏನು ಆಪಾದನೆ ಮಾಡಿದ್ದಾರೆ. ಆಪಾದನೆಯನ್ನು ವಿಚಾರಣೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ ? ಮಾನ್ಯ ಚನ್ನಬಸಪ್ಪನವರು ಜ್ಞಾನವೃದ್ಧರು, ವಯೋವೃದ್ಧರು, ಪ್ರಾಜ್ಞರು. ಇವರು ಬೇರೆಯವರಿಗೆ ಒಂದು ಮಾದರಿಯಾಗಿರತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಅಧ್ಯಕ್ಷರೇ, ತಾವು ಇಲ್ಲಿ ಒಂದು ಒಳ್ಳೆಯ ಸಂಪ್ರದಾಯವನ್ನು ಅನುಸರಿಸುತ್ತಿದ್ದೀರಿ. ಅದೇನೆಂದರೆ ಒಂದೇ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎಷ್ಟೇ ಜನ ಸದಸ್ಯರು ಕಳುಹಿಸಿದ್ದರೂ ಆ ಪ್ರಶ್ನೆಗಳನ್ನೆಲ್ಲಾ ಒಟ್ಟಿಗೆ ಒಂದೇ ಸಲಕ್ಕೆ ತೆಗೆದುಕೊಳ್ಳುವಂಥ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಇದು ಬಹಳ ಒಳ್ಳೆಯದು. ಆದರೆ ನಾನೂ ಕೂಡ ಇದೇ ಆಹಾರದ ಬಗ್ಗೆ ಕಳೆದ ಅಧಿವೇಶನದಲ್ಲೂ ಪ್ರಶ್ನೆ ಕಳುಹಿದ್ದೆ. ಆಗಲೂ ಅದಕ್ಕೆ ಉತ್ತರ ಬರಲಿಲ್ಲ. ಅದಕ್ಕೆ ಮತ್ತೆ ಅದೇ ಪ್ರಶ್ನೆಯನ್ನು ರಿನ್ಯೂ ಮಾಡಿದೆ. ಆದರೆ ಈ ವರೆಗೆ ಈ ಅಧಿವೇಶನದಲ್ಲೂ ಬರುವಂತೆ ಕಾಣುತ್ತಿಲ್ಲ.

ಅಧ್ಯಕ್ಷರು :—ಅದನ್ನು ನಾನು ನೋಡಿಸುತ್ತೇನೆ.